ಕರ್ನಾಟಕ ಸರ್ಕಾರ

ಸಂ. Comp 9 /2003-04

ನೋಂದಣಿ ಮಹಾಪರಿವೀಕ್ಷಕರು
ಹಾಗೂ ಮುದ್ರಾಂಕಗಳ ಆಯುಕ್ತರ ಕಛೇರಿ,
7ನೇ ಮಹಡಿ, BWSSB ಕಟ್ಟಡ,
ಕಾವೇರಿ ಭವನ, ಬೆಂಗಳೂರು,
ದಿನಾಂಕ 18.10.2004.

ಗಣಕೀಕರಣ
ಸುತ್ತೋಲೆ - 12

ವಿಷಯ:- ದೂರವಾಣಿ ಬಳಸುವ ಕುರಿತು

ಉಪನೋಂದಣಾಧಿಕಾರಿಗಳು ಜಿಲ್ಲಾ ನೋಂದಾಣಾಧಿಕಾರಿ ಕಛೇರಿಗೂ, ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರ ಕಛೇರಿಗೂ, ಸರ್ಕಾರಕ್ಕೂ ಹಾಗೂ ಸ್ಥಳೀಯ ಯಾವುದೇ ಕರೆ ಮಾಡಲು ಮತ್ತು ಸಾರ್ವಜನಿಕರಿಂದ ಬಂದಂಥ ದೂರವಾಣಿಯನ್ನು ಸ್ವೀಕರಿಸಲು ಸರ್ವೀಸ್ ಪ್ರೊವೈಡರ್‌ರವರ ಮೂಲಕ ದೂರವಾಣಿ ವ್ಯವಸ್ಥೆ ಮಾಡಲಾಗಿದೆ.

2. ಇದಲ್ಲದೆ ಕಾವೇರಿ ಸಾಫ್ಟ್‌ವೇರ್‌ನಲ್ಲಿ ನೋಂದಾಯಿಸಿದ ದಸ್ತಾವೇಜುಗಳ ಮಾಹಿತಿಯನ್ನು ಜಿಲ್ಲಾ ನೋಂದಾಣಾಧಿಕಾರಿಗಳ ಕಛೇರಿಗೆ ಹಾಗೂ ನೋಂದಣಿ ಮಹಾಪರಿವೀಕ್ಷಕರ ಕಛೇರಿಗೆ Data Transmission ಮಾಡುವ ಮೂಲ ಉದ್ದೇಶದಿಂದ ದೂರವಾಣಿಗಳನ್ನು ಅಳವಡಿಸಲಾಗಿದೆ. ಆದರೆ ರಾಜ್ಯದ ಕೆಲವು ಕಡೆ ದೂರವಾಣಿಯಲ್ಲಿ '95' ಸೌಲಭ್ಯವನ್ನು ಉಪಯೋಗಿಸಿಕೊಂಡು 2 ತಿಂಗಳಿಗೆ ರೂ.4,000/- ರಿಂದ 5,000/- ವರೆಗಿನ ದೂರವಾಣಿ ಬಿಲ್ ಬರುವ ಹಾಗೆ ಉಪಯೋಗಿಸಿರುವುದನ್ನು ಸದರಿ ಕಂಪನಿಯವರು ನನ್ನ ಗಮನಕ್ಕೆ ತಂದಿರುತ್ತಾರೆ. ಉಪನೋಂದಣಾಧಿಕಾರಿ ಕಛೇರಿಗೆ ಒದಗಿಸಿದ ದೂರವಾಣಿಗಳನ್ನು ಅಪವ್ಯಯ ಮಾಡುವುದು ಅಶಿಸ್ತಿನ ಕ್ರಮ. ಉಪನೋಂದಣಾಧಿಕಾರಿಗಳು ಈ ಸುತ್ತೋಲೆ ಸ್ವೀಕರಿಸಿದ ತಕ್ಷಣವೇ, ಆಯಾಯಾ ದೂರವಾಣಿ ವಿನಿಮಯ ಕೇಂದ್ರಕ್ಕೆ ಪತ್ರ ಬರೆದು '95' ಸೌಲಭ್ಯವನ್ನು ತಕ್ಷಣವೇ ಹಿಂತೆಗೆದುಕೊಂಡು STD ಸೌಲಭ್ಯವನ್ನು ಪಡೆಯಲು ಅರ್ಜಿ ಸಲ್ಲಿಸತಕ್ಕದ್ದು. ಸಾರ್ವಜನಿಕ ಹಿತದೃಷ್ಟಿಯಿಂದ ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರ ಕಛೇರಿ, ಸರ್ಕಾರದೊಂದಿಗೆ ಅವಶ್ಯವಾಗಿ ಸಂಪರ್ಕಿಸಲು CMS / ECIL ಕಂಪನಿಯವರಿಗೆ ಪ್ರತಿ ಉಪನೋಂದಣಿ ಕಛೇರಿಗೆ ಪ್ರತಿ 2 ತಿಂಗಳಿಗೆ ರೂ.600/- (ರೂಪಾಯಿ ಆರು ನೂರುಗಳು ಮಾತ್ರ) ರಂತೆ ಟೆಲಿಫೋನ್ ಕಾರ್ಡ್ ಒದಗಿಸಲು ಸೂಚಿಸಲಾಗಿದೆ. ಈ ಸೌಲಭ್ಯವನ್ನು ಉಪಯೋಗಿಸಿಕೊಂಡು STD ಮೂಲಕ ಈ ಕಛೇರಿಗೂ ಹಾಗೂ ಸರ್ಕಾರದೊಂದಿಗೂ ಸಾರ್ವಜನಿಕ ಹಿತದೃಷ್ಟಿಯಿಂದ ಉಪಯೋಗಿಸಬಹುದು.

3. ಜಿಲ್ಲಾ ನೋಂದಾಣಾಧಿಕಾರಿ ಕಛೇರಿಗೆ, ಉಪನೋಂದಾಣಾಧಿಕಾರಿ ಕಛೇರಿ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಯ ಬೇರೆ ಅಧಿಕಾರಿಗಳೊಂದಿಗೆ ಹಾಗೂ ಸ್ಥಳೀಯ ಕರೆಗಳನ್ನು ಮಾಡಬಹುದಾದ ಕರೆಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಉಪಯೋಗಿಸಬಹುದು. ಅದರ ವೆಚ್ಚವನ್ನು CMS/ECIL ಕಂಪನಿಯು ಭರಿಸುತ್ತವೆ.

4. ಕಛೇರಿಯು ಉಪಯೋಗಿಸುವ ಈ ದೂರವಾಣಿಯನ್ನು ಯಾವ ಕಾಲಕ್ಕೂ ಸಾರ್ವಜನಿಕರ ಉಪಯೋಗಕ್ಕೆ ಕೊಡತಕ್ಕದ್ದಲ್ಲ. ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಲು ಆದೇಶಿಸಿದೆ.

(ಸಿ. ಕೃಷ್ಣಪ್ಪ)
ನೋಂದಣಿ ಮಹಾಪರಿವೀಕ್ಷಕರು
ಹಾಗೂ ಮುದ್ರಾಂಕಗಳ ಆಯುಕ್ತರು,
ಬೆಂಗಳೂರು.

1. ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಗೆ
2. ರಾಜ್ಯದ ಎಲ್ಲಾ ಉಪನೋಂದಣಾಧಿಕಾರಿಗಳಿಗೆ
3. ಈ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ.
4. ಗಾರ್ಡ್ ಫೈಲ್
5. ಕಛೇರಿ ಕಡತಕ್ಕೆ.

ಕರ್ನಾಟಕ ಸರ್ಕಾರ

ನಂ. Comp 9 /2003-04

ನೋಂದಣಿ ಮಹಾಪರಿವೀಕ್ಷಕರು
ಹಾಗೂ ಮುದ್ರಾಂಕಗಳ ಆಯುಕ್ತರ ಕಛೇರಿ,
7ನೇ ಮಹಡಿ, BWSSB ಕಟ್ಟಡ,
ಕಾವೇರಿ ಭವನ, ಬೆಂಗಳೂರು,
ದಿನಾಂಕ 12.10.2004.

ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಗೆ

ಮಾನ್ಯರೇ,

ವಿಷಯ:- ದೂರವಾಣಿ ಬಳಸುವ ಕುರಿತು

ಕಾವೇರಿ ದಸ್ತಾವೇಜಿನಲ್ಲಿ ನೋಂದಾಯಿಸಿದ ಡ್ಯಾಟಾವನ್ನು Transmit ಮಾಡಲು ಸರ್ವೀಸ್ ಪ್ರೊವೈಡರ್ ಕಂಪನಿಗಳು ದೂರವಾಣಿಗಳನ್ನು ಒದಗಿಸಿರುತ್ತವೆ. '95' ಸೌಲಭ್ಯದಿಂದಾಗಿ ಇದು ಮಿತವ್ಯಯದಲ್ಲಿ ಬಳಕೆಯಾಗುತ್ತಿಲ್ಲವೆಂದೂ, ಟೆಲಿಫೋನ್ ಬಿಲ್‌ಗಳು ಕಂಪನಿಗಳು ಭರಿಸಲಾರದಷ್ಟು ಬರುತ್ತಿದೆ ಎಂದು ಸರ್ವೀಸ್ ಪ್ರೊವೈಡರ್ ಕಂಪನಿಗಳು ನನ್ನ ಗಮನಕ್ಕೆ ತಂದಿರುತ್ತಾರೆ. ಈ ಟೆಲಿಫೋನ್ ದುರ್ಬಳಕೆ ಕುರಿತು ಜಿಲ್ಲಾ ನೋಂದಣಾಧಿಕಾರಿಗಳ ಮಾಸಿಕ ಸಭೆಯಲ್ಲಿ ತಮ್ಮೆಲ್ಲರೊಂದಿಗೆ ಚರ್ಚಿಸಲಾಗಿದೆ. ಚರ್ಚೆಯಲ್ಲಿ ತೀರ್ಮಾನಿಸಿದಂತೆ, ಪ್ರಾಥಮಿಕವಾಗಿ STD ಮೂಲಕ ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರವನ್ನು ಹಾಗೂ ಈ ಕಛೇರಿಯನ್ನು ಸಂಪರ್ಕಿಸಲು ಸಂಬಂಧಪಟ್ಟ ಕಂಪನಿಯವರೇ ಜಿಲ್ಲಾ ನೋಂದಣಾಧಿಕಾರಿ ಕಛೇರಿಗೆ ಪ್ರತಿ 2 ತಿಂಗಳಿಗೆ ರೂ.1,000/- (ರೂಪಾಯಿ ಒಂದು ಸಾವಿರಗಳು ಮಾತ್ರ) ಗಳ ಟೆಲಿಫೋನ್ ಕಾರ್ಡ್ ಒದಗಿಸಲು ಸೂಚಿಸಲಾಗಿದೆ. ದೂರವಾಣಿ ಬಳಕೆ ನೋಡಿಕೊಂಡು ಈ ಹಣವನ್ನು ಹೆಚ್ಚು ಮಾಡಲಾಗುವುದು. ಈ ಪತ್ರ ತಮಗೆ ತಲುಪಿದ ಕೂಡಲೇ ದೂರವಾಣಿ ಇಲಾಖೆಗೆ ಪತ್ರ ಬರೆದು '95' ಸೌಲಭ್ಯವನ್ನು ತಕ್ಷಣವೇ ಕಡಿತಗೊಳಿಸಿ STD ಸೌಲಭ್ಯ ಒದಗಿಸಲು ಕೋರಿ ಪತ್ರ ಬರೆಯಲು ಸೂಚಿಸಲಾಗಿದೆ. ಇದಲ್ಲದೆ, ಸ್ಥಳೀಯ ದೂರವಾಣಿ ಹಾಗೂ ಇತರೆ ಟೆಲಿಫೋನ್ ಬಿಲ್ಲನ್ನು ಕಂಪೆನಿಯವರೇ ಭರಿಸುತ್ತಾರೆ.

ತಮ್ಮ ನಂಬುಗೆಯ,
ಸಹಿ/-
(ಸಿ. ಕೃಷ್ಣಪ್ಪ)
ನೋಂದಣಿ ಮಹಾಪರಿವೀಕ್ಷಕರು
ಹಾಗೂ ಮುದ್ರಾಂಕಗಳ ಆಯುಕ್ತರು,
ಬೆಂಗಳೂರು.

ಪ್ರತಿಯನ್ನು

1. ECIL Computers Ltd., No.30/1, Cunningham Road, Bangalore-52 ಇವರಿಗೆ ಮಾಹಿತಿಗಾಗಿ ಹಾಗೂ ತಕ್ಷಣವೇ ಪ್ರತಿ ಜಿಲ್ಲಾ ನೋಂದಣಾಧಿಕಾರಿಗಳಿಗೆ ಟೆಲಿಫೋನ್ ಕಾರ್ಡ್ ಒದಗಿಸಲು ಸೂಚಿಸಿದೆ.

2. *CMS Computers Ltd., IInd Floor, Laxmi Complex*, No.54, St. Marks Road, Bangalore -1 ಇವರಿಗೆ ಮಾಹಿತಿಗಾಗಿ ಹಾಗೂ ತಕ್ಷಣವೇ ಪ್ರತಿ ಜಿಲ್ಲಾ ನೋಂದಣಾಧಿಕಾರಿಗಳಿಗೆ ಟೆಲಿಫೋನ್ ಕಾರ್ಡ್ ಒದಗಿಸಲು ಸೂಚಿಸಿದೆ.

(ಸಿ. ಕೃಷ್ಣಪ್ಪ)
ನೋಂದಣಿ ಮಹಾಪರಿವೀಕ್ಷಕರು
ಹಾಗೂ ಮುದ್ರಾಂಕಗಳ ಆಯುಕ್ತರು,
ಬೆಂಗಳೂರು.